# KARNATAKA LOKAYUKTA

No.UPLOK-1/DE/252/2022/ARE-17 Multi Storied Building,
Dr. B.R. Ambedkar Veedhi,
Bengaluru-560 001,
Dated 04.11.2022.

## RECOMMENDATION

Sub:- Departmental inquiry against Sri.Mohan S/o Chayappa Lamani, Village Accountant, Kalghatagi Taluk, Dharwad District – reg.

Ref:- 1) Government Order No.ಕಂಇ 60 ಬಿಡಿಪಿ 2022, Bengaluru, dated 03/09/2022.

2) Nomination order No.UPLOK-1/DE/252/2022, dated 14.09.2022 of the Upalokayukta, State of Karnataka.

3) Inquiry report dated 28.10.2022 of Additional Registrar of Enquiries-17, Karnataka Lokayukta, Bengaluru.

****

The Government by its order dated 03-09-2022 initiated the disciplinary proceedings against Sri.Mohan S/o Chayappa Lamani, Village Accountant, Kalghatagi Taluk, Dharwad District [hereinafter referred to as Delinquent Government Officer/official, for short as

'DGO'] and entrusted the Departmental Inquiry to this Institution.

2. This Institution by Nomination Order No.UPLOK-1/ DE/252/2022, dated 14.09.2022, nominated Additional Registrar of Enquiries-17, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him.

3. The DGO Sri.Mohan S/o Chayappa Lamani, Village Accountant, Kalghatagi Taluk, Dharwad District, was tried for the following charge:-

**ಅನುಬಂಧ-1**

**ದೋಷಾರೋಪಣೆ**

ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮೋಹನ ತಂದೆ ಛಾಯಪ್ಪ ಲಮಾಣಿ, ಗ್ರಾಮಲೆಕ್ಕಾಧಿಕಾರಿ, ಬೀರವಳ್ಳಿ, ಬಗಡಗೇರಿ ಗ್ರಾಮ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಆದ ನೀವು, ದೂರುದಾರರ ತಂದೆಯ ಹೆಸರಿಗೆ ಟೆನನ್ಸಿ ಕಾಯಿದೆಯಡಿ ಮಂಜೂರಾದ ಕಲಘಟಗಿ ತಾಲ್ಲೂಕು, ಬಗಡಗೇರಿ ಗ್ರಾಮ ಹದ್ದಿಯಲ್ಲಿ ಬರುವ ಜಮೀನು ಸರ್ವೆ ನಂ.33/1, ಕ್ಷೇತ್ರ - 2 ಎಕರೆ 20 ಗುಂಟೆ, 52 ಕ್ಷೇತ್ರ 3 ಎಕರೆ 3 ಗುಂಟೆ ಹಾಗೂ ಸರ್ವೆ ನಂ.47 ಕ್ಷೇತ್ರ 13 ಗುಂಟೆ ಜಮೀನುಗಳ ಪಹಣಿ ಪತ್ರಿಕೆಯಲ್ಲಿ ದೂರುದಾರರ ತಂದೆಯ

ಹೆಸರಿನೊಂದಿಗೆ ದೂರುದಾರರ ಊರಿನ ಐದು ಜನರ ಹೆಸರು ಅನಧಿಕೃತವಾಗಿ ಸೇರ್ಪಡೆಯಾಗಿದ್ದು, ಆ ಕಾರಣ ಅವರ ಹೆಸರುಗಳನ್ನು ಉತಾರಾದಲ್ಲಿ ಕಡಿಮೆ ಮಾಡಿ ತಂದೆಯ ಹೆಸರು ಮಾತ್ರ ದಾಖಲಿಸಿಕೊಡುವಂತೆ ದೂರುದಾರರು ದಿನಾಂಕ 02/04/2018 ರಂದು ತಹಶೀಲ್ದಾರ್‌ರವರ ಕಾರ್ಯಾಲಯ ಕಲಘಟಗಿರವರಿಗೆ ಅರ್ಜಿ ಕೊಟ್ಟ ಪ್ರಕಾರ ಕಂದಾಯ ನಿರೀಕ್ಷಕರು ತಮ್ಮ ವರದಿಯನ್ನು ತಹಶೀಲ್ದಾರ್‌ರವರಿಗೆ ನೀಡಿದಾಗ ಸವರಿಯವರು ಅವರ ವರದಿಯನ್ನು ಒಪ್ಪಿ ಉತಾರಾದಲ್ಲಿ ಅನಧಿಕೃತವಾಗಿ ಸೇರ್ಪಡೆಯಾಗಿದ್ದವರ ಹೆಸರು ಕಡಿಮೆ ಮಾಡಲು ದಿ:20/07/2018 ರಂದು ಆದೇಶ ಮಾಡಿದ ನಂತರ ತಾವು ತಮ್ಮ ಡಿಜಿಟಲ್ ಸಹಿ ನೀಡಲು ತಡ ಮಾಡಿದಾಗ ದೂರುದಾರರು ತಮ್ಮನ್ನು ಎರಡು ಸಲ ಮತ್ತು ತಮ್ಮ ಚಿಕ್ಕಪ್ಪನೊಂದಿಗೆ ಒಂದು ಸಲ ನಿಮ್ಮನ್ನು ನಿಮ್ಮ ಕಛೇರಿಯಲ್ಲಿ ಭೇಟಿ ಮಾಡಿ ತಮ್ಮ ಕೆಲಸದ ಬಗ್ಗೆ ಕೇಳಿದಾಗೆಲ್ಲ ನೀವು ಮಾಡಿಕೊಡುತ್ತೇನೆಂದು ದೂರುದಾರರಿಗೆ ಸತಾಯಿಸಿರುತ್ತೀರಿ. ದೂರುದಾರರು ನಿಮಗೆ ತಮ್ಮ ಕೆಲಸದ ಬಗ್ಗೆ ಕೇಳಿದಾಗಲೆಲ್ಲ ನೀವು ದೂರುದಾರರ ಕೆಲಸ ಮಾಡುತ್ತೇನೆ ಎಂದು ಹೇಳಿ ದೂರುದಾರರಿಗೆ ರೂ.10,000/- ಲಂಚದ ಹಣ ಕೊಡಬೇಕೆಂದು ಹಣಕ್ಕೆ ಬೇಡಿಕೆ ಇಟ್ಟಿದ್ದನ್ನು ದೂರುದಾರರು "ನೋಡೋಣ ಸರ್, ಮೊದಲು ನನ್ನ ಕೆಲಸ ಮಾಡಿ ಕೊಡ್ರಿ" ಅಂತ ನಿಮಗೆ ಹೇಳಿರುತ್ತಾರೆ. ನೀವು ದಿನಾಂಕ 31/07/2018 ರಂದು ನಿಮ್ಮ ಡಿಜಿಟಲ್ ಸಹಿ ಕೊಟ್ಟಾಗ ಉತಾರದಲ್ಲಿ ಇದ್ದ ಬೇರೆಯವರ ಹೆಸರು ಕಡಿಮೆಯಾಗಿ ದೂರುದಾರರ ತಂದೆಯ ಹೆಸರು ಮಾತ್ರ ಉಳಿದುಕೊಂಡಿರುತ್ತದೆ. ದೂರುದಾರರು ಬದಲಾದ ಉತಾರಾವನ್ನು ದಿನಾಂಕ 03/08/2018 ರಂದು ಪಡೆದುಕೊಂಡಿರುತ್ತಾರೆ. ದೂರುದಾರರ ತಂದೆಯು ಮೃತರಾಗಿದ್ದರಿಂದ ದಿನಾಂಕ 06/08/2018 ರಂದು ವಾರಸಾ ಪ್ರಮಾಣ ಪತ್ರಕ್ಕಾಗಿ ದೂರುದಾರರು ನಿಮ್ಮನ್ನು ಕಲಘಟಗಿಯ ನಿಮ್ಮ ಹಳೇ ಕಛೇರಿಯ ಆವರಣದಲ್ಲಿ ಭೇಟಿಯಾಗಿ ಅರ್ಜಿಯನ್ನು ಕೊಟ್ಟಾಗ ನೀವು ದೂರುದಾರರಿಗೆ "ಮೊದಲಿಂದು ರೊಕ್ಕ ಕೊಡಲಿಲ್ಲ, ಕೆಲಸ ಮಾಡಿಸ್ಕೊಂಡು ಹೋಗಿಬಿಟ್ರಿ, ಒಂದ ಐದು ಸಾವಿರ ಜಾಸ್ತಿ ಕೊಡು ಏನ, ರಾಘೂ ಮತ್ತು ಪವ್ಮಾರರವರಿಗೆ ಕೊಡಾಕ, ಒಂದು ಹತ್ತು ಸಾವಿರ ನಿಮಗ ಭಾಳ ಏನ್ರಿ, ಕೇಸ್

ದೊಡ್ಡದ ಅದ" ಅಂತಾ ಹೇಳಿರುತ್ತೀರಿ. ಆಗ ದೂರುದಾರರು ನಿಮಗೆ ಸ್ವಲ್ಪ ಕಡಿಮೆ ಮಾಡಲು ಹೇಳಿದಾಗ ನೀವು ಕಡಿಮೆ ಮಾಡಿರುವುದಿಲ್ಲ. ಅದಕ್ಕೆ ದೂರುದಾರರು ನಾಳೆ ಬಂದು ಭೇಟಿಯಾಗುತ್ತೇನೆ ಎಂದು ಹೇಳಿ ಬಂದಿರುತ್ತಾರೆ. ದೂರುದಾರರಿಗೆ ತನ್ನ ಸರ್ಕಾರಿ ಕೆಲಸವನ್ನು ಮಾಡಿಕೊಟ್ಟಿದ್ದಕ್ಕೆ ಲಂಚ ಕೇಳುತ್ತಿರುವ ನಿಮಗೆ ಲಂಚ ಕೊಡಲು ಮನಸ್ಸಿಲ್ಲದಿದ್ದರಿಂದ ನಿಮ್ಮೊಂದಿಗೆ ಮಾತನಾಡಿದ್ದನ್ನು ದೂರುದಾರರು ತಮ್ಮ ಮಗನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರು ದಿನಾಂಕ 13/08/2018 ರಂದು ಭ್ರಷ್ಟಾಚಾರ ನಿಗ್ರಹ ದಳ ಧಾರವಾಡ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರನ್ನು ನೀಡಿದ ಮೇಲೆ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 10/2018ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 (ತಿದ್ದುಪಡಿ ಕಾಯ್ದೆ 2018) ಕಲಂ 7(ಬಿ) ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಆಗ ತನಿಖಾಧಿಕಾರಿಗಳು ನಿಮ್ಮ ಮೇಲೆ ದಾಳಿ ಮಾಡಿ ಪಂಚನಾಮೆಯ ಮೂಲಕ ರೂ. 10,000/-ಗಳನ್ನು ವಶಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ನೀವು ಯಾವುದೇ ಸಮಂಜಸವಾದ ಉತ್ತರ/ವಿವರಣೆ ಹಾಗೂ ಲೆಕ್ಕ ನೀಡಿಲ್ಲ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ನೀವು ದೂರುದಾರರಿಂದ ಲಂಚದ ಹಣವನ್ನು ಪಡೆದು ಕರ್ತವ್ಯಲೋಪವನ್ನು ಎಸಗಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುವುದು ಕಂಡುಬಂದಿರುತ್ತದೆ.

4. The Inquiry Officer (Additional Registrar of Enquiries-17) has held that, the further proceedings against the DGO Sri.Mohan S/o Chayappa Lamani,

Village Accountant, Kalghatagi Taluk, Dharwad District, is discontinued and inquiry is closed.

5. Further, the Inquiry Officer (Additional Registrar of Enquiries-17) has reported that, the DGO submits that, while he was working as Village Accountant, as per the order No.ಸಿಬ್ಬಂದಿ-1/ವಹಿ/10/2018-19, dtd:27-6-2022 of Dy. Commissioner, Dharwad, departmental inquiry has been initiated against the DGO for the similar charges as leveled against the DGO for the similar charges as leveled in the present inquiry by appointing Asst. Commissioner, Dharwad, as Enquiry Officer and Tahasildar, Dharwad Taluk, as Presenting Officer and to conclude the departmental inquiry within two months.

6. Further, the Inquiry Officer (Additional Registrar of Enquiries-17) has reported that, the departmental inquiry against the DGO Sri.Mohan S/o Chayappa Lamani was initiated in ನಂ.ಸಿಬ್ಬಂದಿ-1/ವಹಿ/10/2018-19, before Asst. Commissioner Dharwad and DGO has appeared in the said departmental inquiry and on perusal of the

documents produced by the DGO, it is noticed that the said departmental inquiry is still pending. Hence, in the light of the above observations conducting departmental inquiry against the DGO leads to double jeopardy and present departmental inquiry may be closed.

7. On re-consideration of report of inquiry and on perusal of the entire records, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and to drop further proceedings against DGO Sri.Mohan S/o Chayappa Lamani, Village Accountant, Kalghatagi Taluk, Dharwad District.

8. Action taken in the matter shall be intimated to this Authority.

Connected records are enclosed herewith.

4/11/22

**(JUSTICE K.N.PHANEENDRA)**
Upalokayukta,
State of Karnataka.

7

# KARNATAKA LOKAYUKTA

No: UPLOK-1/DE/252/2022/ARE-17

M.S.Building,
Dr. B.R. Ambedkar Veedhi,
Bengaluru - 560 001.
Dated: 28/10/2022

## ENQUIRY REPORT

**Present** : Rajakumar S. Amminabhavi
Addl. Registrar of Enquiries-17,
Karnataka Lokayukta,
Bengaluru.

**Sub:**-Departmental enquiry against Sri Mohan S/o Chayappa Lamani, Village Accountant, Kalghatagi Taluk, Dharwad District reg.

**Ref:**- 1) Government Order No. Kam E 60 BDP 2022, Bengaluru dated 03/09/2022.

2) Nomination Order No: Uplok-1/DE/252/2022 Bengaluru, Dated 14/09/2022 of Hon'ble Upalokayukta-1.

******

A suo-motu investigation was taken up under Section 7 read with section 9 of The Karnataka Lokayukta Act, 1984, against Sri Mohan S/o Chayappa Lamani, Village Accountant, Kalghatagi Taluk, Dharwad District (hereinafter referred to as 'DGO') on the basis of the material/copy of Charge sheet placed by the Police Inspector, A.C.B., Dharwad District in Crime No. 10/2018.

2. On the basis of the report submitted by Investigating Officer, a report was sent to the Government u/s 12(3) of the Karnataka Lokayukta Act, 1984 against the DGO. Pursuant to the report, Government was pleased to issue the Government Order authorizing Hon'ble Upa-lokayukta to hold an enquiry against the DGO Sri Mohan S/o Chayappa Lamani, Village Accountant, Kalghatagi Taluk, Dharwad District as per reference No. 1.

3. On the basis of the Government Order, nomination order was issued by Hon'ble Upalokayukta-1 on 14/09/2022 authorizing ARE-17 to frame Article of Charges against the DGO to hold an enquiry and to submit a report as per reference No.2. On the basis of the nomination order, the Article of Charges against **DGO** was framed and sent to the Delinquent Government Official on 03/10/2022.

4. The Article of charges and the statement of imputations of misconduct prepared and leveled against the DGO is reproduced here as under;

**ಅನುಬಂಧ-1**
**ದೋಷಾರೋಪಣೆ**

ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮೋಹನ ತಂದೆ ಛಾಯಪ್ಪ ಲಮಾಣಿ, ಗ್ರಾಮಲೆಕ್ಕಾಧಿಕಾರಿ, ಬೀರವಳ್ಳಿ, ಬಗಡಗೇರಿ ಗ್ರಾಮ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಆದ ನೀವು, ದೂರುದಾರರ ತಂದೆಯ ಹೆಸರಿಗೆ ಟೆನನ್ಸಿ ಕಾಯಿದೆಯಡಿ ಮಂಜೂರಾದ ಕಲಘಟಗಿ ತಾಲ್ಲೂಕು, ಬಗಡಗೇರಿ ಗ್ರಾಮ ಹದ್ದಿಯಲ್ಲಿ ಬರುವ ಜಮೀನು ಸರ್ವೆ ನಂ. 33/1, ಕ್ಷೇತ್ರ 2 ಎಕರೆ 20 ಗುಂಟೆ, 52 ಕ್ಷೇತ್ರ 3 ಎಕರೆ 3 ಗುಂಟೆ ಹಾಗೂ ಸರ್ವೆ ನಂ. 47 ಕ್ಷೇತ್ರ 13 ಗುಂಟೆ ಜಮೀನುಗಳ

ಪಹಣಿ ಪತ್ರಿಕೆಯಲ್ಲಿ ದೂರುದಾರರ ತಂದೆಯ ಹೆಸರಿನೊಂದಿಗೆ ದೂರುದಾರರ ಊರಿನ ಐದು ಜನರ ಹೆಸರು ಅನಧಿಕೃತವಾಗಿ ಸೇರ್ಪಡೆಯಾಗಿದ್ದು, ಆ ಕಾರಣ ಅವರ ಹೆಸರುಗಳನ್ನು ಉತಾರಾದಲ್ಲಿ ಕಡಿಮೆ ಮಾಡಿ ತಂದೆಯ ಹೆಸರು ಮಾತ್ರ ದಾಖಲಿಸಿಕೊಡುವಂತೆ ದೂರುದಾರರು ದಿನಾಂಕ 02/04/2018 ರಂದು ತಹಶೀಲ್ದಾರ್‌ರವರ ಕಾರ್ಯಾಲಯ ಕಲಘಟಗಿರವರಿಗೆ ಅರ್ಜಿ ಕೊಟ್ಟ ಪ್ರಕಾರ ಕಂದಾಯ ನಿರೀಕ್ಷಕರು ತಮ್ಮ ವರದಿಯನ್ನು ತಹಶೀಲ್ದಾರ್‌ರವರಿಗೆ ನೀಡಿದಾಗ ಸದರಿಯವರು ಅವರ ವರದಿಯನ್ನು ಒಪ್ಪಿ ಉತಾರಾದಲ್ಲಿ ಅನಧಿಕೃತವಾಗಿ ಸೇರ್ಪಡೆಯಾಗಿದ್ದವರ ಹೆಸರು ಕಡಿಮೆ ಮಾಡಲು ದಿ: 20/07/2018 ರಂದು ಆದೇಶ ಮಾಡಿದ ನಂತರ ತಾವು ತಮ್ಮ ಡಿಜಿಟಲ್ ಸಹಿ ನೀಡಲು ತಡ ಮಾಡಿದಾಗ ದೂರುದಾರರು ತಮ್ಮನ್ನು ಎರಡು ಸಲ ಮತ್ತು ತಮ್ಮ ಚಿಕ್ಕಪ್ಪನೊಂದಿಗೆ ಒಂದು ಸಲ ನಿಮ್ಮನ್ನು ನಿಮ್ಮ ಕಛೇರಿಯಲ್ಲಿ ಭೇಟಿ ಮಾಡಿ ತಮ್ಮ ಕೆಲಸದ ಬಗ್ಗೆ ಕೇಳಿದಾಗೆಲ್ಲ ನೀವು ಮಾಡಿಕೊಡುತ್ತೇನೆಂದು ದೂರುದಾರರಿಗೆ ಸತಾಯಿಸಿರುತ್ತೀರಿ. ದೂರುದಾರರು ನಿಮಗೆ ತಮ್ಮ ಕೆಲಸದ ಬಗ್ಗೆ ಕೇಳಿದಾಗಲೆಲ್ಲ ನೀವು ದೂರುದಾರರ ಕೆಲಸ ಮಾಡುತ್ತೇನೆ ಎಂದು ಹೇಳಿ ದೂರುದಾರರಿಗೆ ರೂ. 10,000/- ಲಂಚದ ಹಣ ಕೊಡಬೇಕೆಂದು ಹಣಕ್ಕೆ ಬೇಡಿಕೆ ಇಟ್ಟಿದ್ದನ್ನು ದೂರುದಾರರು “ನೋಡೋಣ ಸರ್, ಮೊದಲು ನನ್ನ ಕೆಲಸ ಮಾಡಿ ಕೊಡ್ರಿ” ಅಂತ ನಿಮಗೆ ಹೇಳಿರುತ್ತಾರೆ. ನೀವು ದಿನಾಂಕ 31/07/2018 ರಂದು ನಿಮ್ಮ ಡಿಜಿಟಲ್ ಸಹಿ ಕೊಟ್ಟಾಗ ಉತಾರದಲ್ಲಿ ಇದ್ದ ಬೇರೆಯವರ ಹೆಸರು ಕಡಿಮೆಯಾಗಿ ದೂರುದಾರರ ತಂದೆಯ ಹೆಸರು ಮಾತ್ರ ಉಳಿದುಕೊಂಡಿರುತ್ತದೆ. ದೂರುದಾರರು ಬದಲಾದ ಉತಾರಾವನ್ನು ದಿನಾಂಕ 03/08/2018 ರಂದು ಪಡೆದುಕೊಂಡಿರುತ್ತಾರೆ. ದೂರುದಾರರ ತಂದೆಯು ಮೃತರಾಗಿದ್ದರಿಂದ ದಿನಾಂಕ 06/08/2018 ರಂದು ವಾರಸಾ ಪ್ರಮಾಣ ಪತ್ರಕ್ಕಾಗಿ ದೂರುದಾರರು ನಿಮ್ಮನ್ನು ಕಲಘಟಗಿಯ ನಿಮ್ಮ ಹಳೇ ಕಛೇರಿಯ ಆವರಣದಲ್ಲಿ ಭೇಟಿಯಾಗಿ ಅರ್ಜಿಯನ್ನು ಕೊಟ್ಟಾಗ ನೀವು ದೂರುದಾರರಿಗೆ “ಮೊದಲಿಂದು ರೊಕ್ಕ ಕೊಡಲಿಲ್ಲ, ಕೆಲಸ ಮಾಡಿಸ್ಕೊಂಡು ಹೋಗಿಬಿಟ್ರಿ, ಒಂದ ಐದು ಸಾವಿರ ಜಾಸ್ತಿ ಕೊಡು ಏನ, ರಾಘೂ ಮತ್ತು ಪಮ್ಮಾರರವರಿಗೆ ಕೊಡಾಕ, ಒಂದು ಹತ್ತು ಸಾವಿರ ನಿಮಗ ಭಾಳ ಏನ್ರಿ, ಕೇಸ್ ದೊಡ್ಡದ ಅದ” ಅಂತಾ ಹೇಳಿರುತ್ತೀರಿ. ಆಗ ದೂರುದಾರರು ನಿಮಗೆ ಸ್ವಲ್ಪ ಕಡಿಮೆ ಮಾಡಲು ಹೇಳಿದಾಗ ನೀವು ಕಡಿಮೆ

ಮಾಡಿರುವುದಿಲ್ಲ. ಅದಕ್ಕೆ ದೂರುದಾರರು ನಾಳೆ ಬಂದು ಭೇಟಿಯಾಗುತ್ತೇನ ಎಂದು ಹೇಳಿ ಬಂದಿರುತ್ತಾರೆ. ದೂರುದಾರರಿಗೆ ತನ್ನ ಸರ್ಕಾರಿ ಕೆಲಸವನ್ನು ಮಾಡಿಕೊಟ್ಟಿದ್ದಕ್ಕೆ ಲಂಚ ಕೇಳುತ್ತಿರುವ ನಿಮಗೆ ಲಂಚ ಕೊಡಲು ಮನಸ್ಸಿಲ್ಲದಿದ್ದರಿಂದ ನಿಮ್ಮೊಂದಿಗೆ ಮಾತನಾಡಿದ್ದನ್ನು ದೂರುದಾರರು ತಮ್ಮ ಮಗನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರು ದಿನಾಂಕ 13/08/2018 ರಂದು ಭ್ರಷ್ಟಾಚಾರ ನಿಗ್ರಹ ದಳ ಧಾರವಾಡ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರನ್ನು ನೀಡಿದ ಮೇಲೆ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 10/2018ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 (ತಿದ್ದುಪಡಿ ಕಾಯ್ದೆ 2018) ಕಲಂ 7(ಬಿ) ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಆಗ ತನಿಖಾಧಿಕಾರಿಗಳು ನಿಮ್ಮ ಮೇಲೆ ದಾಳಿ ಮಾಡಿ ಪಂಚನಾಮೆಯ ಮೂಲಕ ರೂ. 10,000/-ಗಳನ್ನು ವಶಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ನೀವು ಯಾವುದೇ ಸಮಂಜಸವಾದ ಉತ್ತರ/ವಿವರಣೆ ಹಾಗೂ ಲೆಕ್ಕ ನೀಡಿಲ್ಲ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ನೀವು ದೂರುದಾರರಿಂದ ಲಂಚದ ಹಣವನ್ನು ಪಡೆದು ಕರ್ತವ್ಯಲೋಪವನ್ನು ಎಸಗಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುವುದು ಕಂಡುಬಂದಿರುತ್ತದೆ.

## ಅನುಬಂಧ-2
## ದೋಷರೋಪಣೆಯ ವಿವರ

ಧಾರವಾಡ ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ಉಪಾಧೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಮೋಹನ ತಂದೆ ಛಾಯಪ್ಪ ಲಮಾಣಿ, ಗ್ರಾಮಲೆಕ್ಕಾಧಿಕಾರಿ, ಬೀರವಳ್ಳಿ, ಬಗಡಗೇರಿ ಗ್ರಾಮ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ (ಇನ್ನು ಮುಂದೆ 'ಎದುರುದಾರರು'

ಎಂದು ಕರೆಯಲ್ಪಡುತ್ತಾರೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ಶ್ರೀ ನಬೀಸಾಬ ತಂದೆ ನನ್ನೆಸಾಬ ದೊಡ್ಡಮನಿ, ಸಾ: ಬಗಡಗೇರಿ, ತಾ: ಕಲಘಟಗಿ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ). ಇವರು ಎದುರುದಾರರನ್ನು ಭೇಟಿ ಮಾಡಿದಾಗ ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ದುರ್ನಡತೆ ತೋರಿಸಿರುತ್ತಾರೆ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ತನಿಖೆ ಕೈಗೊಂಡಿರುತ್ತಾರೆ.

2) **ದೂರಿನ ಸಂಕ್ಷಿಪ್ತ ಸಾರಾಂಶ:-**

i. ದೂರುದಾರರು ತಮ್ಮ ದೂರಿನಲ್ಲಿ, ದೂರುದಾರರ ತಂದೆಯ ಹೆಸರಿಗೆ ಟೆನನ್ಸಿ ಕಾಯಿದೆಯಡಿ ಮಂಜೂರಾದ ಕಲಘಟಗಿ ತಾಲ್ಲೂಕು, ಬಗಡಗೇರಿ ಗ್ರಾಮ ಹದ್ದಿಯಲ್ಲಿ ಬರುವ ಜಮೀನು ಸರ್ವೆ ನಂ. 33/1, ಕ್ಷೇತ್ರ 2 ಎಕರೆ 20 ಗುಂಟೆ, 52 ಕ್ಷೇತ್ರ 3 ಎಕರೆ 3 ಗುಂಟೆ ಹಾಗೂ ಸರ್ವೆ ನಂ. 47 ಕ್ಷೇತ್ರ 13 ಗುಂಟೆ ಜಮೀನುಗಳ ಪಹಣಿ ಪತ್ರಿಕೆಯಲ್ಲಿ ದೂರುದಾರರ ತಂದೆಯ ಹೆಸರಿನೊಂದಿಗೆ ದೂರುದಾರರ ಊರಿನ ಐದು ಜನರ ಹೆಸರು ಅನಧಿಕೃತವಾಗಿ ಸೇರ್ಪಡೆಯಾಗಿದ್ದು, ಆ ಕಾರಣ ಅವರ ಹೆಸರುಗಳನ್ನು ಉತಾರಾದಲ್ಲಿ ಕಡಿಮೆ ಮಾಡಿ ತಂದೆಯ ಹೆಸರು ಮಾತ್ರ ದಾಖಲಿಸಿಕೊಡುವಂತೆ ದೂರುದಾರರು ದಿನಾಂಕ 02/04/2018 ರಂದು ತಹಶೀಲ್ದಾರ್‌ರವರ ಕಾರ್ಯಾಲಯ ಕಲಘಟಗಿರವರಿಗೆ ಅರ್ಜಿ ಕೊಟ್ಟ ಪ್ರಕಾರ ಕಂದಾಯ ನಿರೀಕ್ಷಕರು ತಮ್ಮ ವರದಿಯನ್ನು ತಹಶೀಲ್ದಾರ್‌ರವರಿಗೆ ನೀಡಿದಾಗ ಸದರಿಯವರು ಅವರ ವರದಿಯನ್ನು ಒಪ್ಪಿ ಉತಾರಾದಲ್ಲಿ ಅನಧಿಕೃತವಾಗಿ ಸೇರ್ಪಡೆಯಾಗಿದ್ದವರ ಹೆಸರು ಕಡಿಮೆ ಮಾಡಲು ದಿ: 20/07/2018 ರಂದು ಆದೇಶ ಮಾಡಿದ ನಂತರ ಎದುರುದಾರರು ತಮ್ಮ ಡಿಜಿಟಲ್ ಸಹಿ ನೀಡಲು ತಡ ಮಾಡಿದಾಗ ದೂರುದಾರರು ಎದುರುದಾರರನ್ನು ಎರಡು ಸಲ ಮತ್ತು ತಮ್ಮ ಚಿಕ್ಕಪ್ಪನೊಂದಿಗೆ ಒಂದು ಸಲ ಎದುರುದಾರರನ್ನು ಅವರ ಕಛೇರಿಯಲ್ಲಿ ಭೇಟಿ ಮಾಡಿ ತಮ್ಮ ಕೆಲಸದ ಬಗ್ಗೆ ಕೇಳಿದಾಗೆಲ್ಲ ಎದುರುದಾರರು ಮಾಡಿಕೊಡುತ್ತೇನೆಂದು ದೂರುದಾರರಿಗೆ ಸತಾಯಿಸಿರುತ್ತಾರೆ. ದೂರುದಾರರು ಎದುರುದಾರರಿಗೆ ತಮ್ಮ ಕೆಲಸದ ಬಗ್ಗೆ ಕೇಳಿದಾಗಲೆಲ್ಲ ಎದುರುದಾರರು ದೂರುದಾರರ ಕೆಲಸ ಮಾಡುತ್ತೇನೆ ಎಂದು ಹೇಳಿ ದೂರುದಾರರಿಗೆ ರೂ. 10,000/-

ಲಂಚದ ಹಣ ಕೊಡಬೇಕೆಂದು ಹಣಕ್ಕೆ ಬೇಡಿಕೆ ಇಟ್ಟಿದ್ದನ್ನು ದೂರುದಾರರು "ನೋಡೋಣ ಸರ್, ಮೊದಲು ನನ್ನ ಕೆಲಸ ಮಾಡಿ ಕೊಡ್ರಿ" ಅಂತ ಎದುರುದಾರರಿಗೆ ಹೇಳಿರುತ್ತಾರೆ. ಎದುರುದಾರರು ದಿನಾಂಕ 31/07/2018 ರಂದು ತಮ್ಮ ಡಿಜಿಟಲ್ ಸಹಿ ಕೊಟ್ಟಾಗ ಉತಾರದಲ್ಲಿ ಇದ್ದ ಬೇರೆಯವರ ಹೆಸರು ಕಡಿಮೆಯಾಗಿ ದೂರುದಾರರ ತಂದೆಯ ಹೆಸರು ಮಾತ್ರ ಉಳಿದುಕೊಂಡಿರುತ್ತದೆ. ದೂರುದಾರರು ಬದಲಾದ ಉತಾರಾವನ್ನು ದಿನಾಂಕ 03/08/2018 ರಂದು ಪಡೆದುಕೊಂಡಿರುತ್ತಾರೆ. ದೂರುದಾರರ ತಂದೆಯು ಮೃತರಾಗಿದ್ದರಿಂದ ದಿನಾಂಕ 06/08/2018 ರಂದು ವಾರಸಾ ಪ್ರಮಾಣ ಪತ್ರಕ್ಕಾಗಿ ದೂರುದಾರರು ಎದುರುದಾರರನ್ನು ಕಲಘಟಗಿಯ ಎದುರುದಾರರ ಹಳೇ ಕಛೇರಿಯ ಆವರಣದಲ್ಲಿ ಭೇಟಿಯಾಗಿ ಅರ್ಜಿಯನ್ನು ಕೊಟ್ಟಾಗ ಎದುರುದಾರರು ದೂರುದಾರರಿಗೆ "ಮೊದಲಿಂದು ರೊಕ್ಕ ಕೊಡಲಿಲ್ಲ, ಕೆಲಸ ಮಾಡಿಸ್ಕೊಂಡು ಹೋಗಿಬಿಟ್ರಿ, ಒಂದ ಐದು ಸಾವಿರ ಜಾಸ್ತಿ ಕೊಡು ಏನ, ರಾಘೂ ಮತ್ತು ಪಮ್ಮಾರರವರಿಗೆ ಕೊಡಾಕ, ಒಂದು ಹತ್ತು ಸಾವಿರ ನಿಮಗ ಭಾಳ ಏನ್ರಿ, ಕೇಸ್ ದೊಡ್ಡದ ಅದ" ಅಂತಾ ಹೇಳಿರುತ್ತಾರೆ. ಆಗ ದೂರುದಾರರು ಎದುರುದಾರರಿಗೆ ಸ್ವಲ್ಪ ಕಡಿಮೆ ಮಾಡಲು ಹೇಳಿದಾಗ ಎದುರುದಾರರು ಕಡಿಮೆ ಮಾಡಿರುವುದಿಲ್ಲ. ಅದಕ್ಕೆ ದೂರುದಾರರು ನಾಳೆ ಬಂದು ಭೇಟಿಯಾಗುತ್ತೇನೆ ಎಂದು ಹೇಳಿ ಬಂದಿರುತ್ತಾರೆ. ದೂರುದಾರರಿಗೆ ತನ್ನ ಸರ್ಕಾರಿ ಕೆಲಸವನ್ನು ಮಾಡಿಕೊಟ್ಟಿದ್ದಕ್ಕೆ ಲಂಚ ಕೇಳುತ್ತಿರುವ ಎದುರುದಾರರಿಗೆ ಲಂಚ ಕೊಡಲು ಮನಸ್ಸಿಲ್ಲದಿದ್ದರಿಂದ ಎದುರುದಾರರೊಂದಿಗೆ ಮಾತನಾಡಿದ್ದನ್ನು ದೂರುದಾರರು ತಮ್ಮ ಮಗನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii. ದೂರುದಾರರು ದಿನಾಂಕ 13/08/2018 ರಂದು ಭ್ರಷ್ಟಾಚಾರ ನಿಗ್ರಹ ದಳ ಧಾರವಾಡ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರನ್ನು ನೀಡಿದ ಮೇಲೆ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 10/2018 ರಂತೆ ಪಿ.ಸಿ. ಕಾಯಿದೆ ಕಲಂ 7 (ಬಿ) ರಂತೆ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

iii. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಸಿದ್ದಪ್ಪ ತಂದೆ ಶಂಕರ ಯಮನಕನಮರಡಿ ಮತ್ತು ಶ್ರೀ ದೇವರಾಜ್ ತಂದೆ ವಿಠ್ಠಲ ಐರಣಿ ಇವರನ್ನು ಬರಮಾಡಿಕೊಂಡಿದ್ದು, ಅವರುಗಳ ಪರಿಚಯ ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ಹಾಗೂ ದೂರಿನ ಪ್ರತಿಯನ್ನು

ತೋರಿಸಿ, ಪಂಚರುಗಳಿಗೆ ತನಿಖಾಧಿಕಾರಿಗಳು ನೀಡಿ ಅದರಲ್ಲಿರುವ ವಿಷಯವನ್ನು ಓದಿ ತಿಳಿದುಕೊಳ್ಳಲು ಸೂಚಿಸಿರುತ್ತಾರೆ. ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡುಬರುತ್ತದೆ. ತನಿಖಾಧಿಕಾರಿಗಳು ಎದುರುದಾರರಿಗೆ ಕೊಡಬೇಕಾದ ಲಂಚದ ಹಣವನ್ನು ಹಾಜರಪಡಿಸಲು ದೂರುದಾರರಿಗೆ ತಿಳಿಸಿದಾಗ ದೂರುದಾರರು ರೂ.10,000/– ಗಳನ್ನು ತನಿಖಾಧಿಕಾರಿಗಳ ಮುಂದೆ ಹಾಜರಪಡಿಸಿದ್ದು, ತನಿಖಾಧಿಕಾರಿಗಳು ಆ ಹಣವನ್ನು ಪಂಚ–1 ರವರ ಕಡೆಗೆ ಕೊಟ್ಟು ಅದರ ಮೌಲ್ಯ, ನಂಬರ್‌ಗಳನ್ನು ಓದಿ ಹೇಳುವಂತೆ ಸೂಚಿಸಿದ್ದು, ಅದರಂತೆ ಪಂಚ–2 ರವರು ಒಂದು ಹಾಳೆಯಲ್ಲಿ ನಮೂದಿಸಿಕೊಂಡಿರುತ್ತಾರೆ. ಸದರಿ ನೋಟುಗಳು ರೂ.2,000/– ಮುಖಬೆಲೆಯ 3 ನೋಟುಗಳು ರೂ.500/– ಮುಖಬೆಲೆಯ 8 ನೋಟುಗಳು ಒಟ್ಟು ರೂ.10,000/– ಗಳಾಗಿರುತ್ತವೆ. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಅವರ ಸಿಬ್ಬಂದಿಯವರು ದೂರುದಾರರು ಹಾಜರಪಡಿಸಿದ್ದ ನೋಟುಗಳಿಗೆ ಫಿನಾಪ್ತಲಿನ್ ಪೌಡರ್‌ನ್ನು ಸವರಿರುತ್ತಾರೆ. ತನಿಖಾಧಿಕಾರಿಗಳು ಸದರಿ ನೋಟುಗಳನ್ನು ಪಂಚ–2 ರವರಿಗೆ ಮತ್ತೊಮ್ಮೆ ಎಣಿಸುವಂತೆ ತಿಳಿಸಿ ಪಂಚ–1 ರವರಿಗೆ ದೂರುದಾರರ ಅಂಗಶೋಧನೆ ಮಾಡಲು ತಿಳಿಸಿರುತ್ತಾರೆ. ಪಂಚ–1 ರವರು ದೂರುದಾರರ ಅಂಗಿ, ಪ್ಯಾಂಟಿನ ಜೇಬುಗಳನ್ನು ಚೆಕ್ ಮಾಡಿದಾಗ ಅಂಗಿ ಜೇಬಿನಲ್ಲಿ ಒಂದು ಮೊಬೈಲ್ ಮತ್ತು ಪ್ಯಾಂಟಿನ ಬಲಗಡೆ ಜೇಬಿನಲ್ಲಿ ಒಂದು ಕರ್ಚಿಪ್ ಇರುವುದಾಗಿ ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರ ಶರ್ಟಿನ್ ಎಡಗಡೆ ಜೇಬನ್ನು ಖಾಲಿ ಮಾಡಿಸಿದ ನಂತರ ಪಂಚ–2 ರವರಿಗೆ ಫಿನಾಪ್ತಲಿನ್ ಪೌಡರ್ ಸವರಿದ ನೋಟುಗಳನ್ನು ದೂರುದಾರರ ಶರ್ಟಿನ್ ಎಡಗಡೆ ಜೇಬಿನಲ್ಲಿ ಇರಿಸಿರುತ್ತಾರೆ. ತನಿಖಾಧಿಕಾರಿಗಳು ಪಂಚ–2 ರವರ ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ದ್ರಾವಣದ ಬಣ್ಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾದಿಕಾರಿಗಳು ದೂರುದಾರರಿಗೆ ದಿ: 06–08–2018 ರಂದು ರೆಕಾರ್ಡ್ ಮಾಡಿಕೊಂಡಿದ್ದ ಮೊಬೈಲ್‌ನ್ನು ಹಾಜರಪಡಿಸುವಂತೆ ತಿಳಿಸಿದಾಗ ಅವರು ತಮ್ಮ ಮೊಬೈಲ್‌ನ್ನು ಹಾಜರಪಡಿಸಿದಾಗ ತನಿಖಾಧಿಕಾರಿಯವರು ಅದನ್ನು ಪ್ಲೇ ಮಾಡಿ ಪಂಚರಿಗೆ ಕೇಳಿಸಿರುತ್ತಾರೆ. ತನಿಖಾಧಿಕಾರಿಗಳು ಸದರಿ ಸಂಭಾಷಣೆಯ ಭಾಗವನ್ನು ಮೊಬೈಲ್‌ದಿಂದ ಲ್ಯಾಪಟಾಪಗೆ ವರ್ಗಾಯಿಸಿಕೊಂಡು 2 ತದ್ರೂಪಿ ಸಿಡಿಗಳನ್ನು ಹಾಗೂ ಸ್ಕ್ರಿಪ್ಟ್‌ನ್ನು ತಯಾರಿಸಿ ಅದರಲ್ಲಿ ಒಂದು ಸಿಡಿಯನ್ನು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಅದೇ ರೀತಿ ಉಳಿದ ಆರ್ಟಿಕಲ್ಸ್‌ಗಳನ್ನು ಸಹ ಅಮಾನತ್ತು

ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ವಾಯ್ಸ್ ರೆಕಾರ್ಡ್‌ನ್ನು ಕೊಟ್ಟು ಅದನ್ನು ಬಳಸುವ ವಿಧಾನವನ್ನು ತೋರಿಸಿಕೊಟ್ಟು ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಫಿನಾಪ್ತಲಿನ್ ಪೌಡರ್ ಹಚ್ಚಿದ ನೋಟುಗಳನ್ನು ನೀಡಬೇಕು ಎದುರುದಾರರೊಂದಿಗೆ ಮಾತನಾಡಿದ ಸಂಭಾಷಣೆಯನ್ನು ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳಬೇಕು ಮತ್ತು ಎದುರುದಾರರು ಲಂಚದ ಹಣ ಪಡೆದುಕೊಂಡು ಅದನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆಂಬುದನ್ನು ಗಮನಿಸಿ ಖರ್ಚೀಫಿನಿಂದ ಮುಖ ಒರೆಸಿಕೊಳ್ಳುವ ಮೂಲಕ ಸೂಚನೆ ಕೊಡಬೇಕೆಂದು ತಿಳಿಸಿರುತ್ತಾರೆ. ಪಂಚ-1 ರವರಿಗೆ ದೂರುದಾರರೊಂದಿಗೆ ಹೋಗಿ ದೂರುದಾರರು ಮತ್ತು ಎದುರುದಾರರು ಮಾತನಾಡುತ್ತಿದ್ದಾಗ ಹತ್ತಿರದಲ್ಲಿದ್ದು, ಅಲ್ಲಿ ನಡೆಯುವ ವಿದ್ಯಮಾನಗಳನ್ನು, ಸಂಭಾಷಣೆಗಳನ್ನು ಗಮನಿಸಿ ತಾವು ಕೇಳಿದಾಗ ಹೇಳಬೇಕೆಂದು ತಿಳಿಸಿರುತ್ತಾರೆ. ಪಂಚ-2 ಮತ್ತು ಸಿಬ್ಬಂದಿಗೆ ತಮ್ಮ ಜೊತೆಯಲ್ಲಿರಬೇಕೆಂದು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ ದಿ: 13/08/2018 ರಂದು ಮಧ್ಯಾಹ್ನ 2.15 ಘಂಟೆಯಿಂದ 03-15 ಘಂಟೆಯವರೆಗೆ ಧಾರವಾಡ ಎಸಿಬಿ ಕಛೇರಿಯಲ್ಲಿ ಲ್ಯಾಪ್‌ಟಾಪ್ ಮೂಲಕ ಗಣಕೀಕರಣ ಮಾಡಿದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iv. ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲಾ ಔಚಿತ್ಯಪೂರ್ವ ನಡುವಳಿಕೆಗಳನ್ನು ದೂರುದಾರರು ನೆರಳು ಸಾಕ್ಷಿ ಹಾಗೂ ಸಹಪಂಚರ ಸಮಕ್ಷಮ ನಿರ್ವಹಿಸಿ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಠಾಣೆಯಿಂದ ಹೊರಟು ಯರಿಕೊಪ್ಪ, ದುಮ್ಮವಾಡ ರಸ್ತೆಯ ಮೂಲಕ ಕಲಘಟಗಿ ತಲುಪಿ ತಮ್ಮ ವಾಹನವನ್ನು ಹಳೆಯ ತಹಶೀಲ್ದಾರ ಕಛೇರಿಯ ಹತ್ತಿರ ನಿಲ್ಲಿಸಿ ತನಿಖಾಧಿಕಾರಿಗಳು ದೂರುದಾರರು ನೆರಳು ಸಾಕ್ಷಿಯಾದ ಪಂಚ-1 ರವರಿಗೆ ಕೆಳಗೆ ಇಳಿಸಿ ಈ ಮುಂಚೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನೀಡಿದ ಸೂಚನೆಗಳನ್ನು ಪುನಃ ನೀಡಿ ಕಳುಹಿಸಿರುತ್ತಾರೆ. ದೂರುದಾರರು ಮತ್ತು ನೆರಳು ಸಾಕ್ಷಿಯು ಕಂದಾಯ ನೀರಿಕ್ಷಕರು ಹಾಗೂ ತಲಾಟಿಗಳು ಇರುವ ಹಳೆ ತಹಶೀಲ್ದಾರ ಕಛೇರಿಯ ಕಂಪಾಂಡ್ ಒಳಗೆ ಹೋಗಿ ದೂರುದಾರರು ಮತ್ತು ಪಂಚ-1 ರವರು ತಹಶೀಲ್ದಾರ ಕಛೇರಿಯ ಒಳಗೆ ಹೋದಾಗ ತನಿಖಾಧಿಕಾರಿಗಳು ಮತ್ತು ಉಳಿದ ಟ್ರ್ಯಾಪ್ ತಂಡದವರು ಅಲ್ಲಲ್ಲಿ ದೂರುದಾರರಿಗೆ ಕಾಣುವಂತೆ ನಿಂತುಕೊಂಡಿರುತ್ತಾರೆ. ದೂರುದಾರರು ಮತ್ತು ನೆರಳು ಸಾಕ್ಷಿದಾರರು

ತಹಶೀಲ್ದಾರ ಕಛೇರಿಯ ಕೊಠಡಿಗಳಲ್ಲಿ ಹುಡುಕುತ್ತಾ ಅಡ್ಡಾಡಿದ ನಂತರ ದೂರುದಾರರು ಮತ್ತು ಪಂಚ–1 ರವರು ಹೊರಗಡೆ ಬಂದಾಗ ದೂರುದಾರರು ಎದುರುದಾರರಿಗೆ ಫೋನ್ ಮಾಡಿದಾಗ ಎದುರುದಾರರು ಹೊಸ ತಹಶೀಲ್ದಾರ ಕಛೇರಿಗೆ ಬರುವಂತೆ ತಿಳಿಸಿರುತ್ತಾರೆ. ಅದರಂತೆ ದೂರುದಾರರು ಮತ್ತು ಪಂಚ–1 ರವರು ಹೊಸ ತಹಶೀಲ್ದಾರ ಕಛೇರಿಗೆ ಬಂದು ಎಲ್ಲ ಕೊಠಡಿಗಳನ್ನು ಹುಡುಕಾಡಿದಾಗ ಎದುರುದಾರರು ಗ್ರೇಡ್–2 ತಹಶೀಲ್ದಾರರ ಕೊಠಡಿ ಒಳಗೆ ಇದ್ದವರನ್ನು ಭೇಟಿಯಾದಾಗ ಎದುರುದಾರರು ದೂರುದಾರರಿಗೆ ಪಮ್ಮಾರವರನ್ನು ಭೇಟಿಯಾಗಿ ಬಾ ಎಂದು ಕಳುಹಿಸಿರುತ್ತಾರೆ. ದೂರುದಾರರು ಮತ್ತು ಪಂಚ–1 ರವರು ಪುನಃ ತಹಶೀಲ್ದಾರ ಕಛೇರಿಯ ಎಲ್ಲಾ ಕೊಠಡಿಗಳನ್ನು ಪಮ್ಮಾರವರಿಗಾಗಿ ಹುಡುಕಾಡಿದಾಗ ಅವರು ಸಿಕ್ಕಿರುವುದಿಲ್ಲ. ಹಾಗಾಗಿ, ಪುನಃ ಎದುರುದಾರರವರಿಗೆ ಭೇಟಿಯಾಗಿ ಪಮ್ಮಾರವರು ಸಿಗಲಿಲ್ಲಾ ಎಂದು ತಿಳಿಸಿದಾಗ ಎದುರುದಾರರು ಪಮ್ಮಾರವರು ರಜೆಯ ಮೇಲೆ ಇರಬಹುದು ಬರಿ ಹೋಗೋಣ ಎಂದು ತಹಶೀಲ್ದಾರ ಕಛೇರಿಯಿಂದ ಕರೆದುಕೊಂಡು ಹೊರಟು ಬಸ್ ಸ್ಟಾಂಡ್ ಹತ್ತಿರ ಇರುವ ಕೃಷ್ಣಾ ಭವನ ಹೋಟೇಲ್ ಒಳಗೆ ಕರೆದುಕೊಂಡು ಹೋಗಿ ಟೇಬಲ್ ಒಂದರಲ್ಲಿ ಎದುರು ಬದುರಾಗಿ ಕುಳಿತಾಗ ದೂರುದಾರರ ಪಕ್ಕದಲ್ಲಿ ಪಂಚ–1 ರವರು ಕುಳಿತಿರುತ್ತಾರೆ. ದೂರುದಾರರು ಟೀ ಆರ್ಡರ್ ಮಾಡಿರುತ್ತಾರೆ. ಅಷ್ಟರಲ್ಲಿ ಯಾರೋ ಇಬ್ಬರು ಬಂದು ಎದುರುದಾರರನ್ನು ಭೇಟಿಯಾಗಿ ತಮ್ಮ ಕೆಲಸದ ಬಗ್ಗೆ ಮಾತನಾಡಿ ಬಂದವರೊಂದಿಗೆ ಟೀ ಕುಡಿದಾದ ನಂತರ ಎದುರುದಾರರು ಹೋಟೆಲ್ ಹೊರಗಡೆ ಬಂದಿರುತ್ತಾರೆ. ಆಗ ದೂರುದಾರರು ಮತ್ತು ಪಂಚ–1 ರವರು ಎದುರುದಾರರ ಹಿಂದೆ ಹೋದಾಗ ಎದುರುದಾರರು ತಮ್ಮನ್ನು ಭೇಟಿಯಾಗಲು ಬಂದವರನ್ನು ಕಳುಹಿಸಿ ದೂರುದಾರರನ್ನು ಕರೆದುಕೊಂಡು ಪುನಃ ಹೋಟೆಲ್‌ನ ಒಳಗಡೆ ಹೋಗಿ ಟೇಬಲ್ ಒಂದರಲ್ಲಿ ಎದುರು ಬದುರಾಗಿ ಕುಳಿತುಕೊಂಡಾಗ ಎದುರುದಾರರು ದೂರುದಾರರಿಗೆ ಅವರದು ಅವರಿಗೆ ಕೊಡು ನನ್ನದು ಏನದ ನನಗೆ ಕೊಡು ಎಂದು ಕೇಳಿದಾಗ ದೂರುದಾರರು ಎದುರುದಾರರಿಗೆ ಏಣಿಸಿಕೊಳ್ಳಿರಿ ಎಂದು ಹೇಳಿ ಫಿನಾಪ್ತಲಿನ್ ಪೌಡರ್ ಸವರಿದ ನೋಟುಗಳನ್ನು ಕೊಟ್ಟಾಗ ಎದುರುದಾರರು ದೂರುದಾರರಿಂದ ಲಂಚದ ಹಣವಾದ ರೂ.10,000/– ಗಳನ್ನು ಪಡೆದುಕೊಂಡು ಏಣಿಸಿ ತಮ್ಮ ಶರ್ಟಿನ್ ಎಡಗಡೆ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ದೂರುದಾರರು ಕೂಡಲೇ ಅಲ್ಲೆ ಪಕ್ಕದ ಟೇಬಲ್‌ನಲ್ಲಿ ಕುಳಿತಿದ್ದ ತನಿಖಾಧಿಕಾರಿಯವರ ಕಡೆಗೆ ತಿರುಗಿ ತಮ್ಮ ಕರ್ಚಿಪಿನಿಂದ ಮುಖ ಒರೆಸಿಕೊಳ್ಳುವ ಮೂಲಕ

ಸೂಚನೆ ನೀಡಿರುತ್ತಾರೆ. ಆಗ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿಯವರೊಂದಿಗೆ ಅಲ್ಲಿಗೆ ಬಂದು ಎದುರುದಾರರ ಎರಡು ಮೊಣಕೈಗಳನ್ನು ಹಿಡಿದುಕೊಳ್ಳುವಂತೆ ತಮ್ಮ ಸಿಬ್ಬಂದಿಯವರಿಗೆ ತಿಳಿಸಿ ಎದುರುದಾರರಿಗೆ ತಮ್ಮ ಗುರುತಿನ ಚೀಟಿಯನ್ನು ತೋರಿಸಿ ತಮ್ಮ ಪರಿಚಯ ಮಾಡಿಸಿಕೊಂಡು ಎದುರುದಾರರಿಗೆ ಪ್ರಕರಣದ ಬಗ್ಗೆ ವಿವರಣೆಯನ್ನು ನೀಡಿ ಎದುರುದಾರರ ಹೆಸರು ವಿಳಾಸವನ್ನು ಕೇಳಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರ ಎರಡು ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದ ಪ್ರತ್ಯೇಕ ಬಟ್ಟಲುಗಳಲ್ಲಿ ಅದ್ದಿ ತೊಳೆಸಿದಾಗ ದ್ರಾವಣದ ಬಣ್ಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ಎದುರುದಾರರು ತಮ್ಮ ಶರ್ಟಿನ ಜೇಬಿನಲ್ಲಿಟ್ಟುಕೊಂಡಿದ್ದ ಲಂಚದ ಹಣವನ್ನು ಪಂಚ-1 ನೇದವರಿಗೆ ತೆಗೆದು ಪರಿಶೀಲಿಸಲು ತಿಳಿಸಿದಾಗ ಪಂಚ-1 ರವರು ಎದುರುದಾರರ ಶರ್ಟಿನ ಎಡಗಡೆ ಜೇಬಿನಿಂದ ಹಣವನ್ನು ತೆಗೆದು ಹಾಜರಪಡಿಸಿದಾಗ ಪಂಚರು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿಕೊಂಡಿದ್ದ ನೋಟುಗಳ ನಂಬರುಗಳಿಗೆ ಹೋಲಿಸಿ ನೋಡಿದಾಗ ಅವು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹೋಲಿಕೆಯಾಗಿರುತ್ತದೆಂದು ಹೇಳಿದಾಗ ತನಿಖಾಧಿಕಾರಿಗಳು ಸದರಿ ರೂ.10,000/- ಹಣವನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರ ಪ್ಯಾಂಟಿನ ಜೇಬುಗಳನ್ನು ಚೆಕ್ ಮಾಡಿದಾಗ ಅವರ ಜೇಬಿನಲ್ಲಿ ಪರ್ಸ್ ಇದ್ದು, ಅದರಲ್ಲಿ ಒಟ್ಟು ರೂ. 1,000/- ಹಣ, ಮೊಬೈಲ್, ಡೆಬಿಟ್ ಕಾರ್ಡ್‌ಗಳ ಇದ್ದಿದವುಗಳನ್ನು ಎದುರುದಾರರ ವಶಕ್ಕೆ ಬಿಟ್ಟುಕೊಟ್ಟಿರುತ್ತಾರೆ. ಸದರಿ ಸ್ಥಳವು ಸಾರ್ವಜನಿಕ ಸ್ಥಳವಾಗಿದ್ದು, ಹೊಟೇಲ್ ವ್ಯವಹಾರಕ್ಕೆ ಅಡ್ಡಿಪಡಿಸಬಾರದೆಂದು ತಹಶೀಲ್ದಾರ ಕಛೇರಿಗೆ ಹೋಗಿ ಅಲ್ಲಿ ಪಂಚನಾಮೆಯನ್ನು ಮುಂದುವರೆಸೋಣ ಎಂದು ತನಿಖಾಧಿಕಾರಿಗಳು ಅಭಿಪ್ರಾಯ ಪಟ್ಟಾಗ ಪಂಚರು ಒಪ್ಪಿರುತ್ತಾರೆ. ತನಿಖಾಧಿಕಾರಿಗಳು ಎಲ್ಲರನ್ನು ಅಲ್ಲಿಂದ ಕರೆದುಕೊಂಡು ತಹಶೀಲ್ದಾರ ಕಛೇರಿಗೆ ಬಂದು ಅಲ್ಲಿ ಎದುರುದಾರರಿಗೆ ಬೇರೆ ಶರ್ಟಿನ್ ವ್ಯವಸ್ಥೆ ಮಾಡಿಸಿ ಎದುರುದಾರರು ಧರಿಸಿದ ಶರ್ಟ್‌ನ್ನು ಬಿಚ್ಚಿಸಿಕೊಂಡು ಸದರಿ ಶರ್ಟಿನ ಜೇಬಿನ ಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣದ ಬಣ್ಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ಸದರಿ ಶರ್ಟನ್ನು ಮತ್ತು ದ್ರಾವಣವನ್ನು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ತಮ್ಮ ಸ್ವಹೇಳಿಕೆಯನ್ನು ಬರೆದುಕೊಡಲು ತಿಳಿಸಿದಾಗ ಅವರು ತಮ್ಮ

ಹೇಳಿಕೆಯಲ್ಲಿ "ನನಗೆ ಬಗಡಗೇರಿ ಗ್ರಾಮದ ರಹವಾಸಿಯಾದ ನಬಿಸಾಬ ದೊಡಮನಿ ಇವರು ತಹಶೀಲ್ದಾರ ಆಫೀಸಿನಲ್ಲಿ ಕೆಲಸ ಮಾಡುತ್ತಿರುವಾಗ ಒತ್ತಾಯಪೂರ್ವಕವಾಗಿ ನನಗೆ ಕರೆದುಕೊಂಡು ಹೋಗಿ ಮೋಸದಿಂದ ನನಗೆ ಅರಿವು ಆಗದಂತೆ ಬೇಡ ಅಂದರು ನನ್ನ ಕಿಸೆಯಲ್ಲಿ ಹಣವನ್ನು ಇಟ್ಟಿದ್ದು ಇರುತ್ತದೆ:. ಎಂದು ಬರೆದುಕೊಟ್ಟ ಹೇಳಿಕೆ ಬಗ್ಗೆ ತನಿಖಾಧಿಕಾರಿಗಳು ದೂರುದಾರರು ಮತ್ತು ನೆರಳು ಸಾಕ್ಷಿಗೆ ಓದಲು ಕೊಟ್ಟು ಅವರ ಅಭಿಪ್ರಾಯವನ್ನು ಕೇಳಿದಾಗ ಅವರು ಎದುರುದಾರರು ನಂದ ಅಷ್ಟ ಕೊಡಿರಿ ಅವ್ರದ್ದು ಅವ್ರಿಗ ಕೊಡ್ರಿ ಇತ್ಯಾದಿ ಮಾತನಾಡುತ್ತಾ ಕೊನೆಗೆ ಎಷ್ಟು ಅದಾವ ಅವು ಅಂತ ದೂರುದಾರರ ಕಡೆಯಿಂದ ಲಂಚದ ಹಣ ಪಡೆದಿರುತ್ತಾರೆಂದು ಹೇಳಿ ಎದುರುದಾರರ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ.

v. ತನಿಖಾಧಿಕಾರಿಯವರು ಲಂಚದ ಹಣದ ಬಗ್ಗೆ ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

vi. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

vii. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ಧೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ಧೃಢಪಟ್ಟಿರುತ್ತದೆ.

viii. ಎದುರುದಾರರಿಗೆ ದಿನಾಂಕ 16/07/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಗಳನ್ನು ಕೇಳಲಾಗಿತ್ತು. ಆದರೆ ಎದುರುದಾರರಿಗೆ ಸಾಕಷ್ಟು ಸಲ ತಮ್ಮ ಸಮಜಾಯಿಷಿಯನ್ನು ಸಲ್ಲಿಸಲು ಅವಕಾಶ ನೀಡಿದ್ದರು ಸಹ ಅವರು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ. ಹಾಗಾಗಿ, ಎದುರುದಾರರ ಕಡೆಯಿಂದ ಯಾವುದೇ ಸಮಜಾಯಿಷಿ ಇಲ್ಲವೆಂದು ಪರಿಗಣಿಸಲಾಗಿರುತ್ತದೆ. ಹಾಗಾಗಿ, ಈ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡು ಬರುವುದಿಲ್ಲ.

ix. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ

ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ, ಇವುಗಳನ್ನು ಪರಿಶೀಲಿಸಿದಾಗ ದಿನಾಂಕ: 13-08-2018 ರಂದು ಎದುರುದಾರರು ದೂರುದಾರರಿಂದ ರೂ.10,000/- ಲಂಚದ ಹಣವನ್ನು ಖುದ್ದಾಗಿ ಸ್ವೀಕರಿಸಿ ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ದೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3(1)(i) ರಿಂದ (iii)ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

3) ನಂತರ ಎದುರುದಾರರಿಂದ ಸದರಿ ಆರೋಪಗಳಿಗೆ ಸಂಬಂಧಿಸಿದಂತೆ, ಪರಿವೀಕ್ಷಣಾ ಟಿಪ್ಪಣಿಯನ್ನು ದಿನಾಂಕ: 16/07/2021ರಂದು ಕಳುಹಿಸಿ ಅವರಿಂದ ಆಕ್ಷೇಪಣೆಗಳನ್ನು ಕೇಳಲಾಗಿತ್ತು. ಆದರೆ, ಎದುರುದಾರರಿಗೆ ಸಾಕಷ್ಟು ಸಲ ತಮ್ಮ ಸಮಜಾಯಿಷಿಗಳನ್ನು ಸಲ್ಲಿಸಲು ಅವಕಾಶ ನೀಡಿದ್ದರು ಸಹ ಅವರು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ. ಹಾಗಾಗಿ, ಎದುರುದಾರರ ಕಡೆಯಿಂದ ಯಾವುದೇ ಸಮಜಾಯಿಷಿ ಇಲ್ಲವೆಂದು ಪರಿಗಣಿಸಲಾಗಿರುತ್ತದೆ. ಹಾಗಾಗಿ, ಈ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

4) ಆದ್ದರಿಂದ ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳು, ನೀಡಿರುವ ಮಾಹಿತಿಗಳು, ಇತ್ಯಾದಿಗಳಿಂದ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021)ರ ನಿಯಮ 3 (1) (i) ರಿಂದ (iii) ರನ್ವಯ ಶಿಸ್ತು ಕ್ರಮಕ್ಕೆ ಭಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಎದುರುದಾರರಾದ ಶ್ರೀ ಮೋಹನ ತಂದೆ ಭಾಯಪ್ಪ ಲಮಾಣಿ, ಗ್ರಾಮಲೆಕ್ಕಾಧಿಕಾರಿ, ಬೀರವಳ್ಳಿ, ಬಗಡಗೇರಿ ಗ್ರಾಮ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ

ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶೀಫಾರಸ್ಸು ಮಾಡಿದೆ. ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ ಆಪಾದಿತರ ವಿರುದ್ಧ ಶಿಸ್ತು ಕ್ರಮಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಲಾಗಿರುತ್ತದೆ. ಆದ್ದರಿಂದ **ತಮ್ಮ ಮೇಲೆ ಈ ದೋಷಾರೋಪಣೆ.**

5. The said Article of Charge was duly served upon DGO on 03/10/2022. Case was posted for appearance of DGO on 10/10/2022.

6. On 10/10/2022, case was called out. DGO/**Sri Mohan.C. Lamani**, Village Accountant, Kalghatagi Taluk, Dharwad District was present.

7. AOC was duly served upon the DGO. The case was posted for recording FOS of the DGO. He submits written request letter along with documents.

8. On perusal of the request letter, he submits that, while he was working as Village Accountant, as per the order ನಂ.ಸಿಬ್ಬಂದಿ-1/ವಹಿ/ 10/2018-19 **dated 27/06/2022** of Deputy Commissioner, Dharwad departmental enquiry has been initiated against the DGO for the similar charges as leveled in the present enquiry by appointing Assistant Commissioner, Dharwad as Enquiry Officer and Tahasildar, Dharwad as Presenting Officer and to conclude the departmental enquiry within two months.

9. Further, departmental enquiry against the DGO was initiated in ನಂ.ಸಿಬ್ಬಂದಿ-1/ವಹಿ/ 10/2018-19 before Assistant Commissioner, Dharwad and DGO has appeared in the said departmental enquiry and on perusal of the documents produced by DGO it is noticed that, said departmental enquiry is still pending.

10. Hence, in the light of the above observations conducting departmental enquiry against the present DGO leads to double jeopardy. Hence, present departmental enquiry is closed as per orders of Hon'ble Upalokayukta-1 dated 11/10/2022.

11. Accordingly, further proceedings cannot be continued and present enquiry requires to be closed and proceed to pass the following order;

**ORDER**

Disciplinary Enquiry against DGO Sri Mohan S/o Chayappa Lamani, Village Accountant, Kalghatagi Taluk, Dharwad District cannot be continued and this enquiry is treated as 'closed'.

Submitted to His Lordship Hon'ble Upalokayukta-1 for further action in the matter.

Sd/- 28/11/2022

**(RAJKUMAR.S.AMMINABHAVI)**
Additional Registrar Enquiries-17
Karnataka Lokayukta, Bengaluru.